ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦ Volume 160	ಮೈಸೂರು, ಶುಕ್ರವಾರ, ೧೭, ಅಕ್ಟೋಬರ್, ೨೦೨೫ (ಆಶ್ವಯುಜ, ೨೫, ಶಕವರ್ಷ, ೧೯೪೭) MYSURU, FRIDAY, 17, OCTOBER, 2025 (AASHWAYUJA, 25, SHAKAVARSHA, 1947)	ಸಂಚಿಕೆ ೪೨ Issue 42

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಕರ್ನಾಟಕ ಸರ್ಕಾರ

ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ನೆಲಮಹಡಿ, ಪ್ರಜಾ ಸೌಧ, ಪಡೀಲ್, ಮಂಗಳೂರು-575007.

Office of the Senior Geologist, Dept. of Mines and Geology, Ground Flour, Praja Soudha Padil Mangalore.

ದೂರವಾಣಿ ಸಂಖ್ಯೆ: 0824-2429932 ಇ-ಮೇಲ್: ddmangalore.dmg@gmail.com

ಸಂಖ್ಯೆ: ಗಭೂಇ/ಹಿಭೂವಿ(ಮಂ)/ಕಗಗು/ಮರಳು/2025-26/4525 ದಿನಾಂಕ: 15-10-2025

ಅಧಿಸೂಚನೆ

ವಿಷಯ: ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗುರುತಿಸಿರುವ ಮರಳು ನಿಕ್ಷೇಪವನ್ನು ಗ್ರಾಮ ಪಂಚಾಯತ್‌ಗೆ ವಿಲೇವಾರಿ ಮಾಡುವ ಕುರಿತು.

ಉಲ್ಲೇಖ: 1. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮಗಳು 2021.

2. ತಾಲ್ಲೂಕು ಮರಳು ಸಮಿತಿ ಸಭೆಯ ನಿರ್ಣಯ ದಿನಾಂಕ 10-09-2025 & 20-09-2025.

3. ಜಿಲ್ಲಾ ಮರಳು ಸಮಿತಿ ಸಭೆಯ ನಿರ್ಣಯ ದಿನಾಂಕ 24-09-2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹೊಸ ಮರಳು ನೀತಿ, 2020 ರಂತೆ ಗ್ರಾಮ ಪಂಚಾಯತಿ ವ್ಯಾಪ್ತಿಯ I, II & III ನೇ ಶ್ರೇಣಿಯಲ್ಲಿ ಗುರುತಿಸಲಾಗಿರುವ ಮರಳು ನಿಕ್ಷೇಪಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994ರ ತಿದ್ದುಪಡಿ ನಿಯಮ 2021 ರ ನಿಯಮ 31-T ರಂತೆ ಸಂಬಂಧಪಟ್ಟ ಗ್ರಾಮ ಪಂಚಾಯತ್ ಗೆ ವಿಲೇವಾರಿ ಮಾಡಬಹುದಾಗಿದೆ.

ಅದರಂತೆ ಕರ್ನಾಟಕ ಹೊಸ ಮರಳು ನೀತಿ-2020 ಅನ್ನು ಅನುಷ್ಠಾನಗೊಳಿಸಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994 ರ ತಿದ್ದುಪಡಿ ನಿಯಮಗಳು 2021 ರ ನಿಯಮ 31-R(4) (ii) (iii) (iv) & 31-T (1) (2) ರನ್ವಯ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ತಾಲ್ಲೂಕು ಮರಳು

(೮೦೪)

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

ಸಮಿತಿಯು ಜಂಟಿ ಸ್ಥಳ ಪರಿಶೀಲನೆ ನಡೆಸಿ ಮರಳು ನಿಕ್ಷೇಪವನ್ನು ಗುರುತಿಸಿ ನೀಡಿರುವ ಶಿಫಾರಸ್ಸಿನ ಮೇರೆಗೆ, ಕರ್ನಾಟಕ ಉಪಖನಿಜ ರಿಯಾಯಿತಿ ತಿದ್ದುಪಡಿ ನಿಯಮಗಳು 2021 ರ ನಿಯಮ 31-R(3)(iv) & 31-T (3) ಅಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಜಿಲ್ಲಾ ಮರಳು ಸಮಿತಿಯು ಈ ಕೆಳಕಂಡ ಮರಳು ನಿಕ್ಷೇಪವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗೆ ವಿಲೇವಾರಿ ಮಾಡಲು ಅಧಿಸೂಚನೆ ಹೊರಡಿಸಿದೆ.

ಕ್ರ.ಸಂ.	ತಾಲ್ಲೂಕು	ಗ್ರಾಮ	ಸ.ನಂ.	ವಿಸ್ತೀರ್ಣ (ಎಕರೆಗಳಲ್ಲಿ)	ನದಿ ಹೆಸರು	ಮರಳು ಲಭ್ಯತೆಯ ಅಂದಾಜು ಪ್ರಮಾಣ (ಮೆ.ಟನ್)	ಗ್ರಾಮ ಪಂಚಾಯತ್
1	ಬೆಳ್ತಂಗಡಿ	ಚಿಬಿದ್ರೆ	3/*	1.50	ನೇತ್ರಾವತಿ	7224	ಚಿಬಿದ್ರೆ

ಹಿರಿಯ ಭೂವಿಜ್ಞಾನಿ ಹಾಗೂ ಸದಸ್ಯ ಕಾರ್ಯದರ್ಶಿ
ಜಿಲ್ಲಾ ಮರಳು ಸಮಿತಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

PR-190

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA